**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ನ್ಯಾಯಾಲಯ, ದೇವದುರ್ಗ.**

**CC No.723/2024**

**CW -2 PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ವೆಂಕಟೇಶ |
| ತಂದೆ | ಃ | ಚನ್ನಪ್ಪ |
| ವಯಸ್ಸು | ಃ | 53 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಕಾಕರಗಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **22-01-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ದಿನಾಂಕ:14-08-2023 ರಂದು ಬೆಳಿಗ್ಗೆ 11-00 – 12-00 ರ ಅವಧಿಯಲ್ಲಿ ನನ್ನ ಮತ್ತು ಹುಲ್ಲೇಶ ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ಕುರಿ ಕಳ್ಳತನ ವಿಷಯವಾಗಿ ಮಾಡಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತಿ.

ಪಾಟೀ ಸವಾಲು:- ಆರೋಪಿತರ ಪರ ಶ್ರೀ. ವಿ.ಡಿ.ಸಿ ವಕೀಲರಿಂದ.

ಪೊಲೀಸರು ಬಂದಾಗ ನಾನು ಮನೆಯಲ್ಲಿ ಇದ್ದೆ. ಚಾಸಾ-1 ಮತ್ತು ಹನುಮಂತ್ರಾಯ ನನ್ನನ್ನು ಪೋನ್ ಮಾಡಿ ಸ್ಥಳಕ್ಕೆ ಕರೆಸಿಕೊಂಡಿರುತ್ತಾರೆ. ಪೊಲೀಸರು ನನಗೆ ಪಂಚರಾಗುವಂತೆ ಲಿಖಿತ ನೋಟಿಸ್ ನೀಡಿಲ್ಲ. ಕುರಿ ದೊಡ್ಡಿ ಮುಖ್ಯ ರಸ್ತೆಗೆ ಹೊಂದಿಕೊಂಡು ಇರುತ್ತದೆ ಸದರಿ ದೊಡ್ಡಿ ಸರ್ವೆ ನಂ.97 ರಲ್ಲಿ ಇರುತ್ತದೆ. ಪಂಚನಾಮೆಯಲ್ಲಿ ಜಮೀನು ಸರ್ವೆ ನಂಬರನ್ನು ನಮೂಧಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಪೊಲೀಸರು ಪಂಚನಾಮೆಯನ್ನು ಓದಿ ಹೇಳಿರುತ್ತಾರೆ. ಈ ಪ್ರಕರಣ ವಲ್ಲದೆ ಬೇರೆಂದು ಕುರಿ ಕಳ್ಳತನ ಪ್ರಕರಣದಲ್ಲಿ ನಾನು ಪಂಚನಾಗಿರುತ್ತೇನೆ ಅಂದರೆ ಸರಿ. ಕುರಿದೊಡ್ಡಿಯ ಪೂರ್ವಕ್ಕೆ ಶಂಕರ ಯಾದವ್ ಇವರ ಜಮೀನು, ಪಶ್ಚಿಮಕ್ಕೆ ನರಸಿಂಗರಾವ್ ಕುಲಕರ್ಣಿ ಇವರ ಜಾಗ, ಉತ್ತರಕ್ಕೆ ಮುಖ್ಯ ರಸ್ತೆ, ದಕ್ಷಿಣಕ್ಕೆ ನರಸಿಂಗರಾವ್ ಕುಲಕರ್ಣಿ ಇವರ ಜಮೀನು ಇರುತ್ತದೆ. ಹನುಮಂತ್ರಾಯ ನನ್ನ ಸ್ನೇಹಿತ ಅಂದರೆ ಸರಿ. ಹನುಮಂತ್ರಾಯ ಮಾತು ಕೇಳಿ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರು ಪಂಚನಾಮೆ ಮಾಡಿರುತ್ತಾರೆ ಅಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

ಮರುವಿಚಾರಣೆ**:-** ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.